# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2014-15ನೇ ಸಾಲಿಗೆ ಮತ್ಸ್ಯಾಶ್ರಯ-8ನೇ ಹಂತದ ಯೋಜನೆಯಡಿ ನಿರ್ವಸಿತ ಮೀನುಗಾರರಿಗೆ 3000 ಮನೆಗಳನ್ನು ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ ವಿಧಾನಸಭಾ ಕ್ಷೇತ್ರವಾರು ಮನೆಗಳನ್ನು ಹಂಚಿಕೆ ಮಾಡುವ ಬಗ್ಗೆ.

C-4472

7 24

4/9/14

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/71/ಮೀಇಯೋ/2014, ದಿನಾಂಕ:12-05-2014.

(2) ಆದೇಶ ಸಂಖ್ಯೆ:ಪಸಂಮೀ/243/ಮೀಇಯೋ/2012, ದಿನಾಂಕ:05-09-2013.

(3) ಪತ್ರ ಸಂಖ್ಯೆ:ರಾಮಿಕ/169/2013-14, ದಿನಾಂಕ:02-07-2014 ಮತ್ತು 21-08-2014.

******

## ಪ್ರಸ್ತಾವನೆ:

ರಾಜ್ಯ ಸರ್ಕಾರವು 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ನಿರ್ವಸಿತ ಮೀನುಗಾರರಿಗೆ 3 ಸಾವಿರ ಮನೆಗಳನ್ನು ನಿರ್ಮಿಸಲಾಗುವುದು" ಎಂದು ಘೋಷಿಸಿದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕೆ ಇಲಾಖೆಯ ಚಾಲ್ತಿಯಲ್ಲಿರುವ ಮತ್ಸ್ಯಾಶ್ರಯ ಯೋಜನೆಯನ್ನು 2014-15ನೇ ಸಾಲಿಗೆ ಮುಂದುವರೆಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ಮತ್ಸ್ಯಾಶ್ರಯ ಯೋಜನೆಯಡಿ ಗೃಹ ನಿರ್ಮಾಣ ಮಾಡಲು ಮನೆ ಒಂದಕ್ಕೆ ನೀಡುವ ಸಹಾಯಧನದ ಘಟಕ ವೆಚ್ಚವನ್ನು 2013-14ನೇ ಸಾಲಿನಿಂದ ಮಂಜೂರು ಮಾಡುವ ಮನೆಗಳಿಗೆ ಮಾತ್ರ ಅನ್ವಯವಾಗುವಂತೆ ರೂ.60,000-00 ಗಳಿಂದ ರೂ.1.20 ಲಕ್ಷಗಳಿಗೆ ಹೆಚ್ಚಿಸುವ ಯೋಜನೆಗೆ ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ದಿನಾಂಕ: 02-07-2014ರ ಪತ್ರದಲ್ಲಿ, 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ 3000 ಮನೆಗಳನ್ನು ಮಂಜೂರು ಮಾಡಲಾಗುವುದೆಂದು ಘೋಷಿಸಲಾಗಿರುವುದರಿಂದ, ಕಳೆದ 3 ವರ್ಷಗಳಲ್ಲಿ ವಿಧಾನಸಭಾವಾರು ಮಂಜೂರು ಮಾಡಲಾದ ಮನೆಗಳ ವಿವರ ಹಾಗೂ ಬೇಡಿಕೆಯ ಆಧಾರದ ಮೇರೆಗೆ 3000 ಮನೆಗಳನ್ನು ಕ್ಷೇತ್ರವಾರು ನಿಗದಿಪಡಿಸಿ, ಮಂಜೂರಾತಿ ನೀಡಲು ಕೋರಿರುತ್ತಾರೆ. ಮುಂದುವರೆದು, ಮಾನ್ಯ ಸಚಿವರಿಗೆ ವಿಳಾಸಿಸಿ ಬರೆದ ದಿನಾಂಕ:21-08-2014ರ ಪತ್ರದಲ್ಲಿ 2014-15ನೇ ಸಾಲಿನ 3000 ಮನೆಗಳ ವಿಧಾನಸಭಾ ಕ್ಷೇತ್ರವಾರು ವಿತರಣೆ ಮಾಡಬಹುದಾದ ಪಟ್ಟಿಯನ್ನು ಮೀನುಗಾರಿಕೆ ನಿರ್ದೇಶಕರು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

-2-

2014-15ನೇ ಸಾಲಿನ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳ ನಿರ್ಮಾಣದ ಸಹಾಯಧನಕ್ಕಾಗಿ ಒದಗಿಸಿರುವ ಆಯವ್ಯಯದ ಲಭ್ಯತೆಗೆ ಅನುಗುಣವಾಗಿ, 3000 ಮನೆಗಳನ್ನು ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ, 2840 ಮನೆಗಳನ್ನು ಹಂಚುವ ಬಗ್ಗೆ ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ/101/ಮೀಇಯೋ/2014, ಬೆಂಗಳೂರು ದಿನಾಂಕ:02-09-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ನಿರ್ವಸಿತ ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ 3000 ಮನೆಗಳನ್ನು ಘಟಕ ವೆಚ್ಚ ಮನೆ ಒಂದಕ್ಕೆ ರೂ.1.20 ಲಕ್ಷ (ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)ದಂತೆ 2014-15ನೇ ಸಾಲಿನ ಆಯವ್ಯಯ ದಲ್ಲಿ ಒದಗಿಸಿರುವ ಅನುದಾನದ ಮಿತಿಗೊಳಿಸುವ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಈ ಆದೇಶದ **ಅನುಬಂಧ-1**ರಲ್ಲಿ ನಮೂದಿಸಿರುವಂತೆ 2840 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಅನುಸರಿಸಬೇಕಾದ ಕಾರ್ಯ ವಿಧಾನವನ್ನು ಈ ಆದೇಶ **ಅನುಬಂಧ-2**ರಲ್ಲಿ ನಿಗದಿಗೊಳಿಸಿ ಆದೇಶಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ಅನುಕ್ರಮವಾಗಿ ಶೇ.16.25 ರಷ್ಟು ಹಾಗೂ ಶೇ.6.50ರಷ್ಟು ಮನೆಗಳನ್ನು ಕಾಯ್ದಿರಿಸುವುದು.

ಫಲಾನುಭವಿಗಳ ಅರ್ಹತೆ ಹಾಗೂ ಆಯ್ಕೆಯನ್ನು ಆದೇಶ ಸಂಖ್ಯೆ.ಪಸಂಮೀ/112/ಮೀಇಯೋ /2007(ಭಾಗ), ದಿನಾಂಕ:31-07-2008ರಲ್ಲಿ ನಿಗದಿಪಡಿಸಿರುವಂತೆ ನಿಯಮಾನುಸಾರ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಜಯಣ್ಣ) 2/9
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

**ಇವರಿಗೆ:**

1) ಮಹಾಲೇಖಪಾಲರು (ಆಡಿಟ್ 1 ಮತ್ತು 2), ಕರ್ನಾಟಕ ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
4) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಹೊಯಿಗೆ ಬಜಾರ್, ಮಂಗಳೂರು.
7) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
8) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4). ವಿಧಾನಸೌಧ, ಬೆಂಗಳೂರು.
10) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಸಮನ್ವಯ-ಕಾಂಪೆಂಡಿಯಮ್.

ಆದೇಶ ಸಂಖ್ಯೆ:ಪಸಂಮೀ/101/ಮೀಇಯೋ/2014, ಬೆಂಗಳೂರು ದಿನಾಂಕ:02-09-2014

## ಅನುಬಂಧ-1

## ಮತ್ಸ್ಯಾಶ್ರಯ ಯೋಜನೆಯಡಿ 2014-15ನೇ ಸಾಲಿನಲ್ಲಿ 2840 ಮನೆಗಳ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಪಟ್ಟಿ

| ಕ್ರಮ ಸಂಖ್ಯೆ | ವಲಯ | ವಿಧಾನಸಭಾ ಕ್ಷೇತ್ರ | 2014-15ನೇ ಸಾಲಿಗೆ ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ |
|---|---|---|---|
| 1 | ಬೆಳಗಾವಿ | ಕಾಗವಾಡ | 5 |
| | | ಅಥಣಿ | 5 |
| | | ಹುಕ್ಕೇರಿ | 5 |
| | | ನಿಪ್ಪಾಣಿ | 5 |
| | | ಕುಡಚಿ | 10 |
| | | ರಾಯಭಾಗ | 5 |
| | | ಯಮಕನಮರಡಿ | 15 |
| | | ಬೈಲಹೊಂಗಲ | 5 |
| | | ಕಿತ್ತೂರು | 5 |
| | | ಖಾನಾಪೂರ | 5 |
| | | ಸವದತ್ತಿ ಯಲ್ಲಮ್ಮ | 10 |
| | | ಚಿಕ್ಕೋಡಿ | 10 |
| | | ಗೋಕಾಕ | 10 |
| | | ಅರಭಾವಿ | 5 |
| | | ರಾಮದುರ್ಗ | 10 |
| | | ಬೆಳಗಾವಿ ಗ್ರಾಮಾಂತರ | 5 |
| | | | **115** |
| | ವಿಜಾಪೂರ | ವಿಜಾಪುರ | 10 |
| | | ಬಸವನಬಾಗೇವಾಡಿ | 15 |
| | | ನಾಗಠಾಣ | 15 |
| | | ಇಂಡಿ | 10 |
| | | ಸಿಂದಗಿ | 5 |
| | | ಮುದ್ದೇಬಿಹಾಳ | 15 |
| | | ಬಬಲೇಶ್ವರ | 10 |
| | | ದೇವರ-ಹಿಪ್ಪರಗಿ | 10 |
| | | | **90** |

-2-

2/9

| | | | |
|---|---|---|---|
| | ಧಾರವಾಡ | ಧಾರವಾಡ | 15 |
| | | ಹುಬ್ಬಳ್ಳಿ | 10 |
| | | ಹುಬ್ಬಳ್ಳಿ(ಗ್ರಾ) | 10 |
| | | ಕುಂದಗೋಳ | 10 |
| | | ಕಲಘಟಗಿ | 10 |
| | | ನವಲಗುಂದ | 5 |
| | | | **60** |
| | ಬಾಗಲಕೋಟೆ | ಬಾಗಲಕೋಟೆ | 15 |
| | | ಬಾದಾಮಿ | 15 |
| | | ಹುನಗುಂದ | 10 |
| | | ಜಮಖಂಡಿ | 20 |
| | | ಮುಧೋಳ | 10 |
| | | ಬೀಳಗಿ | 15 |
| | | ತೇರದಾಳ | 20 |
| | | | **105** |
| | ಹಾವೇರಿ | ಹಾವೇರಿ | 15 |
| | | ಹಾನಗಲ್ | 20 |
| | | ಹಿರೇಕೆರೂರು | 10 |
| | | ರಾಣೇಬೆನ್ನೂರು | 15 |
| | | ಬ್ಯಾಡಗಿ | 10 |
| | | ಶಿಗ್ಗಾಂವ-ಸವಣೂರು | 10 |
| | | | **80** |
| | ಗದಗ | ಶಿರಹಟ್ಟಿ | 20 |
| | | ಗದಗ | 10 |
| | | ನರಗುಂದ | 10 |
| | | ರೋಣ | 10 |
| | | | **50** |
| 2 | ಬಳ್ಳಾರಿ ವಲಯ | ಬಳ್ಳಾರಿ ಗ್ರಾಮಾಂತರ | 5 |
| | | ಬಳ್ಳಾರಿ ನಗರ | 5 |
| | | ಕಂಪ್ಲಿ | 5 |
| | | ವಿಜಯನಗರ | 5 |
| | | ಹಡಗಲಿ | 10 |
| | | ಸಿರಗುಪ್ಪ | 10 |
| | | ಹಗರಿಬೊಮ್ಮನಹಳ್ಳಿ | 10 |
| | | ಕೂಡ್ಲಿಗಿ | 5 |
| | | ಸಂಡೂರು | 20 |
| | | | **75** |

-3-

2/9

| | | | |
|---|---|---|---|
| | ಗುಲ್ಬರ್ಗಾ | ಗುಲಬರ್ಗಾ ಗ್ರಾಮೀಣ | 10 |
| | | ಗುಲಬರ್ಗಾ ಉತ್ತರ | 5 |
| | | ಗುಲಬರ್ಗಾ ದಕ್ಷಿಣ | 5 |
| | | ಆಳಂದ | 10 |
| | | ಜೇವರ್ಗಿ | 20 |
| | | ಅಫಜಲಪುರ | 15 |
| | | ಚಿಂಚೋಳಿ | 10 |
| | | ಸೇಡಂ | 10 |
| | | ಚಿತ್ತಾಪುರ | 10 |
| | | | **95** |
| | ಕೊಪ್ಪಳ | ಕೊಪ್ಪಳ | 20 |
| | | ಗಂಗಾವತಿ | 10 |
| | | ಕನಕಗಿರಿ | 15 |
| | | ಕುಷ್ಟಗಿ | 5 |
| | | ಯಲಬುರ್ಗಾ | 15 |
| | | | **65** |
| | ಬೀದರ್ | ಬೀದರ್ (ದ) ಗ್ರಾ | 10 |
| | | ಬೀದರ್ (ಉ) | 10 |
| | | ಹುಮನಾಬಾದ್ | 10 |
| | | ಬಸವ ಕಲ್ಯಾಣ | 10 |
| | | ಭಾಲ್ಕಿ | 10 |
| | | ಔರಾದ | 5 |
| | | | **55** |
| | ಯಾದಗಿರಿ | ಯಾದಗಿರಿ | 10 |
| | | ಗುರುಮಿಠಕಲ್ | 15 |
| | | ಶಹಾಪುರ | 5 |
| | | ಸುರಪುರ | 10 |
| | | | **40** |
| | ರಾಯಚೂರು | ರಾಯಚೂರು ನಗರ | 10 |
| | | ರಾಯಚೂರು (ಗ್ರಾ) | 10 |
| | | ದೇವದುರ್ಗ | 10 |
| | | ಮಾನ್ವಿ | 10 |
| | | ಸಿಂಧನೂರು | 10 |
| | | ಲಿಂಗಸೂಗೂರು | 10 |
| | | ಮಸ್ಕಿ | 10 |
| | | | **70** |

-4-

2/9

| | | | |
|---|---|---|---|
| 3 | ಶಿವಮೊಗ್ಗ ವಲಯ-ದಾವಣಗೆರೆ | ದಾವಣಗೆರೆ ಉತ್ತರ | 5 |
| | | ದಾವಣಗೆರೆ(ದ) | 10 |
| | | ಮಾಯಕೊಂಡ | 10 |
| | | ಜಗಳೂರು | 10 |
| | | ಚನ್ನಗಿರಿ | 10 |
| | | ಹೊನ್ನಾಳಿ | 10 |
| | | ಹರಿಹರ | 10 |
| | | ಹರಪನಹಳ್ಳಿ | 10 |
| | | | **75** |
| | ಚಿಕ್ಕಮಗಳೂರು | ಶೃಂಗೇರಿ | 10 |
| | | ಮೂಡಿಗೆರೆ | 5 |
| | | ಚಿಕ್ಕಮಗಳೂರು | 5 |
| | | ತರೀಕೆರೆ | 10 |
| | | ಕಡೂರು | 5 |
| | | | **35** |
| | ಚಿತ್ರದುರ್ಗ | ಚಳ್ಳಕೆರೆ | 20 |
| | | ಹೊಳಲ್ಕೆರೆ | 10 |
| | | ಮೊಳಕಾಲ್ಮೂರು | 10 |
| | | ಚಿತ್ರದುರ್ಗ | 10 |
| | | ಹಿರಿಯೂರು | 35 |
| | | ಹೊಸದುರ್ಗ | 35 |
| | | | **120** |
| | ಶಿವಮೊಗ್ಗ | ಶಿವಮೊಗ್ಗ ಗ್ರಾಮೀಣ | 10 |
| | | ಶಿವಮೊಗ್ಗ ನಗರ | 10 |
| | | ಭದ್ರಾವತಿ | 10 |
| | | ಶಿಕಾರಿಪುರ | 10 |
| | | ಸೊರಬ | 10 |
| | | ಸಾಗರ | 25 |
| | | ತೀರ್ಥಹಳ್ಳಿ | 15 |
| | | | **90** |
| 4 | ಬೆಂಗಳೂರು ವಲಯ | ಯಲಹಂಕ | 5 |
| | | ಕೆ.ಅರ್,ಪುರ | 5 |
| | | ಆನೇಕಲ್ | 5 |
| | | | **15** |

-5-

2/9

| | | | |
|---|---|---|---|
| | ಬೆಂಗಳೂರು ಗ್ರಾಮಾಂತರ | ನೆಲಮಂಗಲ | 5 |
| | | ದೊಡ್ಡಬಳ್ಳಾಪುರ | 5 |
| | | ಹೊಸಕೋಟೆ | 5 |
| | | ಬ್ಯಾಟರಾಯನಪುರ-ಯಶವಂತಪುರ | 15 |
| | | | **30** |
| | ರಾಮನಗರ | ಮಾಗಡಿ | 15 |
| | | ಕನಕಪುರ | 30 |
| | | ರಾಮನಗರ | 10 |
| | | ಚನ್ನಪಟ್ಟಣ | 15 |
| | | | **70** |
| | ಕೋಲಾರ | ಕೆ.ಜಿಎಫ್ | 5 |
| | | ಕೋಲಾರ | 10 |
| | | ಶ್ರೀನಿವಾಸಪುರ | 35 |
| | | ಮಾಲೂರು | 10 |
| | | ಬಂಗಾರಪೇಟೆ | 10 |
| | | ಮುಳಬಾಗಿಲು | 5 |
| | | | **75** |
| | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 10 |
| | | ಗೌರಿಬಿದನೂರು | 10 |
| | | ಚಿಂತಾಮಣಿ | 5 |
| | | ಶಿಡ್ಲಘಟ್ಟ | 5 |
| | | ಚಿಕ್ಕಬಳ್ಳಾಪುರ | 5 |
| | | | **35** |
| | ತುಮಕೂರು | ಕುಣಿಗಲ್ | 10 |
| | | ತಿಪಟೂರು | 10 |
| | | ಚಿಕ್ಕನಾಯ್ಕನಹಳ್ಳಿ | 10 |
| | | ತುರುವೆಕೆರೆ | 10 |
| | | ಕೊರಟಗೆರೆ | 10 |
| | | ಗುಬ್ಬಿ | 10 |
| | | ಶಿರಾ | 30 |
| | | ತುಮಕೂರು ನಗರ | 10 |
| | | ಮಧುಗಿರಿ | 25 |
| | | ತುಮಕೂರು ಗ್ರಾಮಾಂತರ | 10 |
| | | ಪಾವಗಡ | 10 |
| | | | **145** |

-6-

2/9

| | | | |
|---|---|---|---|
| 5 | ಮೈಸೂರು | ಹುಣಸೂರು | 15 |
| | | ಪಿರಿಯಾಪಟ್ಟಣ | 15 |
| | | ಹೆಚ್.ಡಿ.ಕೋಟೆ | 15 |
| | | ಕೆ.ಆರ್.ನಗರ | 15 |
| | | ತಿ.ನರಸೀಪುರ | 25 |
| | | ನಂಜನಗೂಡು | 15 |
| | | ವರುಣಾ | 40 |
| | | ಕಷ್ಣರಾಜ | – |
| | | ಚಾಮರಾಜ | – |
| | | ನರಸಿಂಹರಾಜ | – |
| | | ಚಾಮುಂಡೇಶ್ವರಿ | 10 |
| | | | **150** |
| | ಚಾಮರಾಜ ನಗರ | ಚಾಮರಾಜನಗರ | 15 |
| | | ಗುಂಡ್ಲುಪೇಟೆ | 20 |
| | | ಕೊಳ್ಳೇಗಾಲ | 15 |
| | | ಹನೂರು | 15 |
| | | | **65** |
| | ಮಂಡ್ಯ ಜಿಲ್ಲೆ | ಕೆ.ಆರ್.ಪೇಟೆ | 10 |
| | | ಮದ್ದೂರು | 10 |
| | | ಮಳವಳ್ಳಿ | 25 |
| | | ಮಂಡ್ಯ | 15 |
| | | ನಾಗಮಂಗಲ | 10 |
| | | ಮೇಲುಕೋಟೆ | 30 |
| | | ಶ್ರೀರಂಗಪಟ್ಟಣ | 15 |
| | | | **115** |
| | ಹಾಸನ ಜಿಲ್ಲೆ | ಅರಸೀಕೆರೆ | 10 |
| | | ಅರಕಲಗೂಡು | 15 |
| | | ಬೇಲೂರು | 15 |
| | | ಶ್ರವಣಬೆಳಗೊಳ | 10 |
| | | ಹೊಳೆನರಸೀಪುರ | 15 |
| | | ಹಾಸನ | 10 |
| | | ಸಕಲೇಶಪುರ | 10 |
| | | | **85** |

-7-

2-19

| | | | |
|---|---|---|---|
| | ಕೊಡಗು | ಮಡಿಕೇರಿ | 10 |
| | | ವೀರಾಜಪೇಟೆ | 10 |
| | | | **20** |
| 6 | ಮಂಗಳೂರು | ಮೂಡಬಿದಿರೆ | 40 |
| | | ಮಂಗಳೂರು(ಉ) | 15 |
| | | ಮಂಗಳೂರು(ದ) | 5 |
| | | ಮಂಗಳೂರು | 40 |
| | | ಬಂಟ್ವಾಳ | 15 |
| | | ಬೆಳ್ತಂಗಡಿ | 20 |
| | | ಪುತ್ತೂರು | 10 |
| | | ಸುಳ್ಯ | 5 |
| | | | **150** |
| | ಉಡುಪಿ | ಕಾಪು | 90 |
| | | ಉಡುಪಿ | 90 |
| | | ಕುಂದಾಪುರ | 90 |
| | | ಬೈಂದೂರು | 90 |
| | | ಕಾರ್ಕಳ | 10 |
| | | | **370** |
| 7 | ಕಾರವಾರ | ಕಾರವಾರ | 90 |
| | | ಕುಮಟಾ | 40 |
| | | ಭಟ್ಕಳ | 90 |
| | | ಯಲ್ಲಾಪುರ | 25 |
| | | ಶಿರಸಿ | 10 |
| | | ಹಳಿಯಾಳ | 40 |
| | | | **295** |
| | | **ಒಟ್ಟು** | **2840** |

2/9
(ಜಿ.ಜಯಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

2/9

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2014-15ನೇ ಸಾಲಿಗೆ ಮತ್ಸ್ಯಾಶ್ರಯ-8ನೇ ಹಂತದ ಯೋಜನೆಯಡಿ ಮಂಜೂರಾದ 3000 ಮನೆಗಳ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ.- 1) ಆದೇಶ ಸಂಖ್ಯೆ:ಪಸಂಮೀ/101/ಮೀಇಯೋ/2014, ದಿನಾಂಕ: 02-09-2014 ಮತ್ತು 19-09-2014.

2) ಆದೇಶ ಸಂಖ್ಯೆ:ಪಸಂಮೀ/101/ಮೀಇಯೋ/2014, ದಿನಾಂಕ: 25-10-2014.

3) ಪತ್ರ ಸಂಖ್ಯೆ: ಮೀನಿ/169/ರಾಮಿಕ/2014, ದಿನಾಂಕ: 28-10-2014.

ಕರ್ನಾಟಕ ರಾಜ್ಯ ಸರ್ಕಾರ ಮೀನುಗಾರಿಕೆ ನಿರ್ದೇಶನಾಲಯ
10 DEC 2014
ಬೆಂಗಳೂರು

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ನಿರ್ವಸಿತ ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ 3000 ಮನೆಗಳನ್ನು ಘಟಕ ವೆಚ್ಚ ಮನೆ ಒಂದಕ್ಕೆ ರೂ.1.20 ಲಕ್ಷದಂತೆ 2014-15ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಗೊಳಿಸುವ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ 2840 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ, ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಅನುಸರಿಸಬೇಕಾದ ಕಾರ್ಯವಿಧಾನವನ್ನು ನಿಗದಿಗೊಳಿಸಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ಸದರಿ ಯೋಜನೆಯಡಿ ಆಡಳಿತಾತ್ಮಕ ಮಂಜೂರಾತಿ ನೀಡಲಾದ 3000 ಮನೆಗಳಲ್ಲಿ 2840 ಮನೆಗಳನ್ನು ಹಂಚಿಕೆ ಮಾಡಿ ಉಳಿದ 160 ಮನೆಗಳ ಪೈಕಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 5 ಮನೆಗಳನ್ನು ಹಾಗೂ ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ 10 ಮನೆಗಳನ್ನು ಹಂಚಿಕೆ ಮಾಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆರವರ ಪತ್ರದಲ್ಲಿ, 2014-15ನೇ ಸಾಲಿಗೆ ಮಂಜೂರಾಗಿರುವ 3000 ಮನೆಗಳ ನಿರ್ಮಾಣದ ಅನುಷ್ಠಾನಕ್ಕಾಗಿ ಪ್ರಥಮ ಕಂತಾಗಿ ಲೆಕ್ಕ ಶೀರ್ಷಿಕೆ 2405-00-103-0-20-422-423-059 ರಡಿ ರೂ.373.39 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಹಾಗೂ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ನೇಮಿಸಿರುವ ನೋಡೆಲ್ ಸಂಸ್ಥೆಯಾದ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರು ಸಲ್ಲಿಸಿರುವ ಪೇಯೀಸ್ ರಸೀದಿಗೆ ಮೀನುಗಾರಿಕೆ ನಿರ್ದೇಶಕರು ಮೇಲು ರುಜುಗೊಳಿಸಿ ರಾಜ್ಯ ಹುಜೂರ್ ಖಜಾನೆಯಿಂದ ಸೆಳೆದು ಪಾವತಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ 101 ಮೀಇಯೋ 2014, ಬೆಂಗಳೂರು ದಿನಾಂಕ: 05-12-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2014-15ನೇ ಸಾಲಿನಲ್ಲಿ ಮತ್ಸ್ಯಾಶ್ರಯ-8ನೇ ಹಂತದ ಯೋಜನೆಯಡಿ ಮಂಜೂರಾದ 3000 ಮನೆಗಳ ನಿರ್ಮಾಣಕ್ಕಾಗಿ ಲೆಕ್ಕ ಶೀರ್ಷಿಕೆ 2405-00-103-0-20 ಅಡಿಯಲ್ಲಿ ಉಪ ಶೀರ್ಷಿಕೆಗಳಾದ 059-ಇತರೆ ಖರ್ಚುಗಳು ಅಡಿಯಲ್ಲಿ ರೂ.223.00 ಲಕ್ಷ, 422-ಪರಿಶಿಷ್ಟ ಜಾತಿ ಉಪ ಯೋಜನೆ ಅಡಿಯಲ್ಲಿ ರೂ.50.00 ಲಕ್ಷ, 423-ಗಿರಿಜನ ಉಪಯೋಜನೆ ಅಡಿಯಲ್ಲಿ ರೂ.25.00 ಲಕ್ಷ ಹೀಗೆ ಪ್ರಥಮ ಕಂತಾಗಿ ರೂ.298.00 ಲಕ್ಷ (ಎರಡುನೂರ ತೊಂಬತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಮೊತ್ತವನ್ನು ನೋಡಲ್ ಏಜೆನ್ಸಿಯಾದ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಮಂಗಳೂರು ಇವರು ಸಲ್ಲಿಸುವ ಪೇಯೀಸ್ ರಸೀದಿಗೆ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರು ಮೇಲು ರುಜುಗೊಳಿಸಿ ರಾಜ್ಯ ಹುಜೂರ್ ಖಜಾನೆಯಿಂದ ಸೆಳೆದು ಫಲಾನುಭವಿಗಳಿಗೆ ಪಾವತಿಸಲು ಅನುಮತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಪಸಂಮೀ/89/ಆಂಆಸ/2014, ದಿನಾಂಕ: 03-12-2014ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6.12.14

(ಕೆ.ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ,
5) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಮಂಗಳೂರು.
6) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ)
7) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-4.
8) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ /ಹೆಚ್ಚಿನ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2014-15ನೇ ಸಾಲಿಗೆ ಮತ್ಸ್ಯಾಶ್ರಯ-8ನೇ ಹಂತದ ಯೋಜನೆಯಡಿ ನಿರ್ವಸಿತ ಮೀನುಗಾರರಿಗೆ 3000 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡುವ ಬಗ್ಗೆ.

C-5832

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/101/ಮೀಇಯೋ/2014, ದಿನಾಂಕ:02-09-2014 ಮತ್ತು ತಿದ್ದುಪಡಿ ದಿನಾಂಕ:19-09-2014.

(2) ಪತ್ರ ಸಂಖ್ಯೆ:ರಾಮೀಕ/169/2013-14, ದಿನಾಂಕ:12-09-2014.

******

28/10/14

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ನಿರ್ವಸಿತ ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ 3000 ಮನೆಗಳನ್ನು ಘಟಕ ವೆಚ್ಚ ಮನೆ ಒಂದಕ್ಕೆ ರೂ.1.20 ಲಕ್ಷದಂತೆ 2014-15ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಗೊಳಿಸುವ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ 2840 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ, ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಅನುಸರಿಸಬೇಕಾದ ಕಾರ್ಯವಿಧಾನವನ್ನು ನಿಗದಿಗೊಳಿಸಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, 2014-15ನೇ ಸಾಲಿಗೆ ಮತ್ಸ್ಯಾಶ್ರಯ ಯೋಜನೆಯಡಿ ಒಟ್ಟು 3000 ಮನೆಗಳ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಿದ್ದ ಪ್ರಸ್ತಾವನೆಯಲ್ಲಿ ಒಟ್ಟು 2840 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಮಂಜೂರು ಮಾಡಿ ಆದೇಶಿಸಲಾಗಿದ್ದು, ವಿಧಾನಸಭಾ ಕ್ಷೇತ್ರವಾರು ಮನೆಗಳ ಬೇಡಿಕೆ ಪಟ್ಟಿಯ ಪ್ರಸ್ತಾವನೆಯನ್ನು ಸಲ್ಲಿಸುವಾಗ ಕಣ್ತಪ್ಪಿನಿಂದಾಗಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಮನೆಗಳ ವಿಂಗಡಣೆಯ ವಿವರ ಬಿಟ್ಟು ಹೋಗಿರುವುದರಿಂದ, ಸದರಿ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು 5 ಮನೆಗಳನ್ನು ಹಂಚಿಕೆ ಮಾಡಿ ಮಂಜೂರಾತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ/101/ಮೀಇಯೋ/2014, ಬೆಂಗಳೂರು ದಿನಾಂಕ: 25-10-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ನಿರ್ವಸಿತ ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ 2014-15ನೇ ಸಾಲಿಗೆ ಮತ್ಸ್ಯಾಶ್ರಯ ಯೋಜನೆಯಡಿ ಆಡಳಿತಾತ್ಮಕ ಮಂಜೂರಾತಿ ನೀಡಲಾದ 3000 ಮನೆಗಳಲ್ಲಿ 2840 ಮನೆಗಳನ್ನು ಹಂಚಿಕೆ ಮಾಡಿದ ಉಳಿದ 160 ಮನೆಗಳ ಪೈಕಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 5 ಮನೆಗಳನ್ನು ಹಾಗೂ ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ 10 ಮನೆಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಅನುಸರಿಸಬೇಕಾದ ಕಾರ್ಯ ವಿಧಾನವನ್ನು ಹಾಗೂ ಫಲಾನುಭವಿಗಳ ಅರ್ಹತೆ ಹಾಗೂ ಆಯ್ಕೆಯನ್ನು ಆದೇಶ ಸಂಖ್ಯೆ: ಪಸಂಮೀ/101/ಮೀಇಯೋ/2014, ದಿನಾಂಕ:02-09-2014 ಮತ್ತು ತಿದ್ದುಪಡಿ ದಿನಾಂಕ: 19-09-2014ರಂತೆ ನಿಯಮಾನುಸಾರ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

25/10
(ಜಿ.ಜಯಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

**ಇವರಿಗೆ:**

1) ಮಹಾಲೇಖಪಾಲರು (ಆಡಿಟ್ 1 ಮತ್ತು 2), ಕರ್ನಾಟಕ ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ
4) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಹೊಯಿಗೆ ಬಜಾರ್, ಮಂಗಳೂರು.
7) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
8) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4). ವಿಧಾನಸೌಧ, ಬೆಂಗಳೂರು.
10) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಸಮನ್ವಯ-ಕಾಂಪೆಂಡಿಯಮ್.